ಮಧ್ಯಂತರ ಅರ್ಜಿ ನಂಬರಃ 5 ರ ಆದೇಶದ ಮೇರೆಗೆ ದಿನಾಂಕಃ 11-10-2018 ರಂದು ಪಿ.ಡಬ್ಲೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಆರ್.ವಿ.ಡಬ್ಲೂ ವಕೀಲರಿಂದಃ

ನಾನು ಈ ದಾವೆಯನ್ನು ಪ್ರತಿವಾದಿಯರು ನನ್ನ ಮೇಲೆ ದೌರ್ಜನ್ಯ ಮಾಡಿದ್ದರಿಂದ ಈ ದಾವೆಯನ್ನು ಮಾಡಿರುತ್ತೇನೆ. ನಾನು ಆ ಕುರಿತು ಪೋಲಿಸ ಠಾಣೆಯಲ್ಲಿ ಫಿರ್ಯಾದಿ ನೀಡಿರುವದಿಲ್ಲ. ಆಡೂರ ಪೋಲಿಸರು ನನ್ನ ಫಿರ್ಯಾದಿಯನ್ನು ತೆಗೆದುಕೊಳ್ಳದೇ ಇರುವದರಿಂದ ನಾನು ಅವರ ಹಿರಿಯ ಅಧಿಕಾರಿಗಳ ಹತ್ತಿರ ಹೋಗಿರುವದಿಲ್ಲ. ನಾನು ರಿ.ಸ.ನಂಬರಃ 10 ರ 4 ನೇ ಹಿಸ್ಸೇಯ ಮೇಲೆ ದಾವೆ ಮಾಡಿರುತ್ತೇನೆ. ರಿ.ಸ.ನಂಬರಃ 4 ಕ್ಷೇತ್ರ 01 ಎ-25 ಗುಂಟೆ ಇರುತ್ತದೆ. ಪ್ರತಿವಾದಿಯರು ಎಲ್ಲ ಹಿಸ್ಸೇಗೆ ಸಂಬಂಧಿಸಿದಂತೆ ನನಗೆ ಅಡೆತಡೆ ಮಾಡಿರುತ್ತಾರೆ. ಪ್ರತಿವಾದಿಯರು ಈ ದಾವೆಯಲ್ಲಿ ಹಾಕಿರುವ ಕೈಫಿಯತನ್ನು ನಾನು ಒದಿರುವದಿಲ್ಲ.

ರಿ.ಸ.ನಂಬರಃ 10/4 ರಲ್ಲಿ ಕ್ಷೇತ್ರ 01 ಎ-25 ಗುಂಟೆ ಪ್ರತಿವಾದಿಯರು ಎಂದೂ ತಮ್ಮ ಜಮೀನು ಎಂದು ಸಾಧಿಸಿರುವದಿಲ್ಲ ಅಂದರೆ ಸರಿಯಲ್ಲ. ಸದರಿ ಕ್ಷೇತ್ರದ ವಹಿವಾಟಿಗೆ ಪ್ರತಿವಾದಿಯರು ನನಗೆ ಹರಕತ್ ಮಾಡಿರುವದಿಲ್ಲ ಅಂದರೆ ಸರಿ. ನನ್ನ ತಂಟೆ ಇರುವದು ಕೇವಲ ತೆಂಗಿನ ಗಿಡ ಮತ್ತು ಜಮೀನಿಗೆ ಸಂಬಂಧಿಸಿದಂತೆ ಇರುತ್ತದೆ. ರಿ.ಸ.ನಂಬರಃ 10 ರ ಒಟ್ಟು ಕ್ಷೇತ್ರ ಎಷ್ಟು ಇರುತ್ತದೆ ಅಂತಾ ನನಗೆ ಗೊತ್ತಿರುವದಿಲ್ಲ ರಿ.ಸ.ನಂಬರಃ 10 ರಲ್ಲಿ ಒಟ್ಟು 10 ಪೋಟು ಹಿಸ್ಸೆಗಳಾಗಿರುತ್ತವೆ. ಪೋಡಿಯಾದ ಬಗ್ಗೆ ನಾನು ನಕ್ಷೆಯನ್ನು ನೋಡಿರುತ್ತೇನೆ, ಆದರೆ ಅದನ್ನು ಹಾಜರುಪಡಿಸಿರುವದಿಲ್ಲ. ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವದಿಲ್ಲ.

ನಾನು ಪ್ರತಿವಾದಿಯರಿಗೆ ಸಂಬಂಧಿಸಿದ ರಿ.ಸ.ನಂಬರಃ 5 ನೇದ್ದಕ್ಕೆ ದಾವೆ ಮಾಡಿರುತ್ತೇನೆ. ಸದರಿ ರಿ.ಸ.ನಂಬರಃ 10 ಕ್ಷೇತ್ರ 01 ಎ-25 ಗುಂಟೆಯನ್ನು ಖರೀದಿ ಹಿಡಿದಿರುತ್ತೇನೆ. ಸದರಿ ಆಸ್ತಿಯನ್ನು ಹೆಗ್ಗಪ್ಪ ಮಕರವಳ್ಳಿ ಎನ್ನುವವರಿಂದ ಖರೀದಿ ಹಿಡಿದಿರುತ್ತೇನೆ. ಪ್ರತಿವಾದಿಯರು ರಿ.ಸ.ನಂಬರಃ 5 ನ್ನು ಖರೀದಿ ಹಿಡಿದಿರುತ್ತಾರೆ. ನನ್ನ ದಾವಾ ಅಸಲರ್ಜಿಯಲ್ಲಿ ನಮೂದಿಸಿದ ಚೆಕಬಂದಿಯು ಖರೀದಿ ಪತ್ರದಲ್ಲಿ ಇರುವ ಹಾಗೆ ಇರುತ್ತದೆ. ನಾನು ಖರೀದಿ ಹಿಡಿದ ಆಸ್ತಿಯ ಪೂರ್ವಕ್ಕೆಃ ಮಹಾದೇವಪ್ಪ ಮಕರವಳ್ಳಿ ಅವರಿಗೆ ಸಂಬಂಧಿಸಿದ ರಿ.ಸ.ನಂಬರಃ 15 ರ ಜಮೀನು ಇರುತ್ತದೆ. ಪಶ್ಚಿಮಕ್ಕೆಃ ಯಲ್ಲಪ್ಪ ದೇವಸೂರ ಇವರ ಹಿತ್ತಲು, ಉತ್ತರಕ್ಕೆಃ ಮಹಾದೇವಪ್ಪ ಮಕರವಳ್ಳಿ ಇವರ ಜಮೀನು, ದಕ್ಷಿಣಕ್ಕೆಃ ಶಂಕ್ರಪ್ಪ ಕಾಡಪ್ಪನವರ ಇವರ ಜಮೀನು ಇರುತ್ತದೆ

ಮಹಾದೇವಪ್ಪ ಮತ್ತು ಹೆಗ್ಗಪ್ಪ ಇಬ್ಬರೂ ಅಣ್ಣತಮ್ಮಂದಿರು ಇರುತ್ತಾರೆ. ಸದರಿಯವರು ಬೇರೆಯಾಗಿರುತ್ತಾರೆ. ಆದರೆ ಅವರು ಯಾವ ವರ್ಷ ಬೇರೆಯಾಗಿರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ. ಸದರಿಯವರು ಡ.ನಂಬರಃ 350 ರ ಪ್ರಕಾರ 1993 ರಲ್ಲಿ ಹಿಸ್ಸೇ ಮಾಡಿಕೊಂಡಿರುತ್ತಾರೆ. ನಾನು 2001 ರಲ್ಲಿ ಖರೀದಿ ಹಿಡಿದಿರುತ್ತೇನೆ. ಸದರಿ ಮಹಾದೇವಪ್ಪ ಮತ್ತು ಹೆಗ್ಗಪ್ಪ ಇವರು ಹಿಸ್ಸೇಯಾಗಿ 10 ವರ್ಷಗಳ ನಂತರ ನಾನು ಖರೀದಿ ಹಿಡಿದಿರುತ್ತೇನೆ. ನನ್ನ ಆಸ್ತಿಯ ವಿವರಣೆಯನ್ನು ನನ್ನ ಖರೀದಿ ಪತ್ರದಲ್ಲಿ ಒಂದು ಮತ್ತು ದಾವೆಯಲ್ಲಿ ಬೇರೆ ಬೇರೆ ಬರೆಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಈ ದಾವೆಯನ್ನು ತಪ್ಪು ಚೆಕಬಂದಿಯನ್ನು ನೀಡಿ ಪ್ರತಿವಾದಿಯರಿಗೆ ಕಿರುಕುಳ ಕೊಡಬೇಕು ಎನ್ನುವ ಉದ್ದೇಶದಿಂದ ದಾವೆಯನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಎಂದೂ ನನ್ನ ಆಸ್ತಿಗೆ ಹರಕತ್ ಮಾಡಿರುವದಿಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನಗೆ ಹಕ್ಕು ಇರುವದಿಲ್ಲ ಅಂತಾ ಹೇಳಿರುವದಿಲ್ಲ, ಆ

ಆಸ್ತಿಯಲ್ಲಿ ನಮಗೆ ಹಕ್ಕು ಇರುತ್ತದೆ ಅಂತಾ ಎಂದು ಪ್ರತಿವಾದಿಯರು ಹೇಳಿರುವದಿಲ್ಲ ಅಂದರೆ ಸರಿಯಲ್ಲ.

ಮಹಾದೇವಪ್ಪ ಮತ್ತು ಹೆಗ್ಗಪ್ಪನಿಗೆ ಭೂನ್ಯಾಯಮಂಡಳಿಯಲ್ಲಿ 03 ಎ-14 ಗುಂಟೆ ಮಂಜೂರಾಗಿರುತ್ತದೆ ಅಂದರೆ ಸರಿಯಲ್ಲ. ಅಣ್ಣ-ತಮ್ಮಂದಿರು ಹಿಸ್ಸೇಯಾಗುವ ಪೂರ್ವದಲ್ಲಿ ಮತ್ತು ನನಗೆ ಖರೀದಿ ಕೊಡುವದಕ್ಕಿಂತ ಮುಂಚೆ ಅಣ್ಣ-ತಮ್ಮ ಕೂಡಿ 03 ಎ-14 ಗುಂಟೆ ಕ್ಷೇತ್ರವನ್ನು ವಹಿವಾಟು ಮಾಡುತ್ತಿದ್ದರು ಅಂದರೆ ಸರಿ. ನನಗೆ ಖರೀದಿ ಕೊಡುವ ಪೂರ್ವದಲ್ಲಿ 03 ಎ-14 ಗುಂಟೆ ಕ್ಷೇತ್ರವನ್ನು ಪ್ರತಿವಾದಿಯರು ವೈಜ್ಞಾನಿಕವಾಗಿ ವಿಭಜನೆ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿರುವದಿಲ್ಲ. ನಾನು ನನ್ನ ಜಮೀನನ್ನು ಖರೀದಿ ಹಿಡಿಯುವ ಪೂರ್ವದಲ್ಲಿ ಮತ್ತು ಖರೀದಿ ಮಾಡಿದ ನಂತರ ಅಳತೆ ಮಾಡಿಸಿರುತ್ತೇನೆ. ಸದರಿ ಅಳತೆ ಮಾಡಿದ ಬಗ್ಗೆ ಸರ್ವೆ ಇಲಾಖೆಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನಗೆ ಸಂಬಂಧಿಸಿದ ಜಮೀನನ್ನು ಸರ್ವೆ ಇಲಾಖೆಯಿಂದ ಯಾವುದೇ ಅಳತೆ ಮಾಡಿಸಿರುವದಿಲ್ಲ ಅಂದರೆ ಸರಿಯಲ್ಲ.

ತೋಟದಲ್ಲಿರುವ ತೆಂಗಿನಮರವನ್ನು ನಾನು ಖರೀದಿ ಮಾಡಿದ ಮೇಲೆ 2006 ರಲ್ಲಿ ಹಚ್ಚಿರುತ್ತೇನೆ. ಸದರಿ ಗಿಡಗಳನ್ನು ಯಾವ ಪಾರಂನಿಂದ ತಂದಿರುತ್ತೇನೆ ಎಂದು ನನಗೆ ನೆನಪಿರುವದಿಲ್ಲ, ಅದಕ್ಕೆ ಸಂಬಂಧಿಸಿದ ದಾಖಲೆಗಳು ನನ್ನ ಹತ್ತಿರ ಇರುವದಿಲ್ಲ. ನಾನು ಬೋರವೆಲ್ ಹೊಡೆಸಿದ ಬಗ್ಗೆ ದಾಖಲೆ ಇರುತ್ತದೆ, ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ಕ್ಷೇತ್ರ 03 ಎ-14 ಗುಂಟೆಯನ್ನು ಹೆಗ್ಗಪ್ಪ ಮತ್ತು ಮಹಾದೇವಪ್ಪ ಸಮನಾಗಿ ಹಂಚಿಕೊಂಡಿರುತ್ತಾರೆ ಅಂದರೆ ಸರಿ. ಮಹಾದೇವಪ್ಪನಿಗೆ ಸರ್ವೆ ನಂಬರಃ 3 ನೇ ಹಿಸ್ಸಾ ಬಂದಿರುತ್ತದೆ. ಪಿ.ಟಿ.ಶೀಟ್ ಯಾವ ವರ್ಷದಲ್ಲಿ ತಯಾರಿಸಿರುತ್ತಾರೆ ಅಂತಾ ನನಗೆ ಗೊತ್ತಿರುವದಿಲ್ಲ. ಸದರಿ ಮಹಾದೇವಪ್ಪ

ಮತ್ತು ಹೆಗ್ಗಪ್ಪನ ಇವರ ಯಾವ ಹಿಸ್ಸೇಗಳಲ್ಲಿ ಗಿಡಗಳು ಇವೆ ಅಂತಾ ಸ್ಪಷ್ಟನೆ ಇರುವದಿಲ್ಲ ಅಂದರೆ ಸಾಕ್ಷಿಯು ಸದರಿ ಗಿಡಗಳನ್ನು ಖರೀದಿಸಿದ ನಂತರ ನಾನು ಹಚ್ಚಿರುತ್ತೇನೆ ಅಂತಾ ನುಡಿಯುತ್ತಾರೆ. ಸದರಿ ಗಿಡಗಳು ನನ್ನ ಜಮೀನಿನ ಪೂರ್ವಭಾಗದಲ್ಲಿ ಇರುತ್ತವೆ. ಸದರಿ ಗಿಡಗಳು ಬಗ್ಗೆ ಫಕ್ಕೀರಪ್ಪ ಕೋಟಿ ಎನ್ನುವವರು ತಕರಾರು ಮಾಡಿರುತ್ತಾರೆ. ಪೂರ್ವ ಭಾಗದಲ್ಲಿ ಫಕ್ಕೀರಪ್ಪ ಕೋಟಿ ಇವರ ಜಮೀನು ಬರುವದಿಲ್ಲ. ಪ್ರತಿವಾದಿಯರು ಯಾವುದೇ ರೀತಿಯಿಂದ ರಿ.ಸ.ನಂಬರಃ 10/4 ರಲ್ಲಿ ಎಂದು ನನ್ನ ಹಿಸ್ಸಾಕ್ಕೆ ಅಡೆತಡೆ ಮಾಡಿರುವದಿಲ್ಲ ಮತ್ತು ನನ್ನ ಹಕ್ಕನ್ನು ಅಲ್ಲಗಳೆದಿರುವದಿಲ್ಲ ಅಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಜಮೀನನ್ನು ಅತೀಕ್ರಮಣ ಮಾಡಿರುತ್ತೇನೆ ಅಂದರೆ ಸರಿಯಲ್ಲ ನಾನು 5 ನೇ ಹಿಸ್ಸೇಯಲ್ಲಿ ಅತೀಕ್ರಮಣ ಮಾಡಿರುತ್ತೇನೆ ಅಂದರೆ ಸರಿಯಲ್ಲ ನಾನು ಖೊಟ್ಟಿ ಸಂಗತಿಗಳನ್ನು ಆಧರಿಸಿ ಈ ದಾವೆಯನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ. ನೀನು ಅತೀಕ್ರಮಣ ಮಾಡಿದ್ದನ್ನು ಸಂಶಯಗೊಂಡು ಬಿಟ್ಟುಕೊಡು ಅಂತಾ ಕೇಳಿದಕ್ಕೆ ಖೊಟ್ಟಿ ಸಂಗತಿಯನ್ನು ಆಧರಿಸಿ ಈ ದಾವೆಯನ್ನು ಮಾಡಿರುತ್ತೀ ಆ ಕಾರಣಕ್ಕೆ ಪ್ರತಿವಾದಿಯರು ಅಳತೆ ಮಾಡಿಸಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಅಳತೆ ಮಾಡುವಾಗ ಇರುವದಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ವಾದಿಯು ಪಿ.ಟಿ.ಶೀಟ್ ಹಾಜರುಮಾಡಲು ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶವನ್ನು ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಹೇಳಿಕೆಯಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ ಇದೆ ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ದಿನಾಂಕಃ 11-10-2018 ಹಾನಗಲ್.

ಸಾಕ್ಷಿದಾರರ ಸಹಿ.